**ಓ ಎಸ್ ನಂಃ 222/2021**
**ಪಿ.ಡಬ್ಲ್ಯೂ - 02**
**ದಿನಾಂಕಃ 04.06.2026.**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹಚ್ ಆರ್ ಎನ್ ವಕೀಲರಿಂದಃ</u>**

ದಾವೆಯನ್ನು ಅಂಜಿನಪ್ಪನವರು ರಾಮಾನಾಯ್ಕ ಎನ್ನುವವರ ಮೇಲೆ ಹಾಕಿರುತ್ತಾರೆ. ರಾಮಾನಾಯ್ಕನವರ ತಂದೆಯ ಹೆಸರು ಗೊತ್ತಿಲ್ಲ. ಅವರ ಊರು ಜೋಡಿ ಶ್ರೀರಾಂಪುರ. ಆಸ್ತಿ ನನ್ನದು ಎಂದು ವಾದಿಯು ದಾವೆ ಸಲ್ಲಿಸಿರುತ್ತಾರೆ. ಸ್ವತ್ತಿನ ಸರ್ವೆ ನಂ. 88. ಗೊರವಿನಕಲ್ಲು ಗ್ರಾಮಕ್ಕೆ ಸೇರಿದ್ದಾಗಿದೆ. ಒಟ್ಟು 2 ಎಕರೆ ಇರುತ್ತದೆ. ದಾವಾ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ- ಹಳ್ಳ, ಪಶ್ಚಿಮಕ್ಕೆ - ಸರ್ಕಾರಿ ಕಾಡು, ಉತ್ತರಕ್ಕೆ - ಸರ್ಕಾರಿ ಗುಡ್ಡ, ದಕ್ಷಿಣಕ್ಕೆ - ರಾಮಾನಾಯ್ಕ. ಸದರಿ ಸ್ವತ್ತು ವಾದಿಗೆ ಸಾಗುವಳಿ ಆಧಾರದ ಮೇಲೆ ಬಂದಿರುತ್ತದೆ. ಸಾಗುವಳಿ ಚೀಟಿಯನ್ನು ನಾನು ನೋಡಿರುತ್ತೇನೆ. ಅದು ನೊಂದಣಿಯಾಗಿರುವುದಿಲ್ಲ. ಸರ್ವೆ ನಂ. 88 ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರಿನಲ್ಲಿ ಮೂರು ಜನ ಸಾಗುವಳಿ ಮಾಡುತ್ತಿರುತ್ತಾರೆ. ಸರ್ವೆ ನಂ. 88 ಒಟ್ಟು 500 ಎಕರೆ 16 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು 300 ಜನ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರದವರುಸಾಗುವಳಿ ಚೀಟಿಯನ್ನು ಯಾರಿಗೂ ನೀಡಿಲ್ಲ ಎಂದರೆ ಸರಿಯಲ್ಲ. ಈ ಹಂತ ಹಂತವಾಗಿ ಸಾಗವಳಿ ಚೀಟಿಯನ್ನು ನೀಡಲು ಸರ್ಕಾರದವರು ಸಿದ್ದತೆಯನ್ನು ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು 3 ಜನ ಸಾಗುವಳಿ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಜನಪ್ಪನವರ ತಂದೆಯ ಹೆಸರು ಜಂಟಿ ಹನುಮಣ್ಣ, ಅವರದ್ದು ಪೊನ್ನೇನಹಳ್ಳಿ ಅದು ಕಸಬಾ ಹೋಳಿ ಬರುತ್ತದೆ ಎಂದರೆ ಸರಿ. ವಾದಿಯು 18 ವರ್ಷದಿಂದ ಸಾಗುವಳಿ ಮಾಡುತ್ತಿದ್ದಾರೆ. ಪಹಣಿಯಲ್ಲಿ ವಾದಿಯ ಹೆಸರು ಇದೆ. ವಾದಿಯು ಜಮೀನನ್ನು ಹದ್ದುಬಸ್ತು ಮಾಡಿಸಿರುತ್ತಾರೆ. ಸುಮಾರು 16 ವರ್ಷದ ಹಿಂದೆ ಮಾಡಿರುತ್ತಾರೆ. ಪೋಡ್ ಕಲ್ಲುಗಳನ್ನು ನೆಟ್ಟಿರುತ್ತಾರೆ. ಸದರಿ ಜಮೀನನ್ನು ನಾನು ಸಹ 3 ವರ್ಷ ಸಾಗುವಳಿ ಮಾಡಿದ್ದೇನೆ. ನನಗೆ ಪೋಡು ಕಲ್ಲು ಗೊತ್ತು. ಒಟ್ಟು 9 ಪೋಡು ಕಲ್ಲುಗಳನ್ನು ನೆಟ್ಟಿರುತ್ತಾರೆ. ಸದರಿ ಜಮೀನಿನಲ್ಲಿ ಗುತ್ತಿ ಇತ್ತು. ಜಮೀನಿನ ಮಧ್ಯದಲ್ಲಿ ಒಂದು ಗುತ್ತಿ ಇತ್ತು. ಅರ್ಧ ಎಕರೆ ಖರಾಬು ಇರುತ್ತದೆ. ಜಮೀನಿನ ಅಕ್ಕ ಪಕ್ಕ ನನ್ನ ಯಾವುದೇ ಸ್ವತ್ತು ಇಲ್ಲ. ಸರ್ಕಾರದವರು ಯಾವುದೇ ಸಾಗುವಳಿ ಚೀಟಿಯನ್ನು ಅಂಜನಪ್ಪನವರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಅಂಜನಪ್ಪನವರು ದಾವಾಸ್ವತ್ತಿನ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯು ಸುಳ್ಳು ದಾವೆಯನ್ನು ತಂದಿರುತ್ತಾರೆ ಎಂದರೆ ಸರಿಯಲ್ಲ. ನಾನು

ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.

**ಓ ಎಸ್ ನಂಃ**
**ಪಿ.ಡಬ್ಲ್ಯೂ -**
**ದಿನಾಂಕಃ 18.11.2025**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ  ವಕೀಲರಿಂದಃ**

ಸುಳ್ಳು ದಾವೆಯನ್ನು ಹೂಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.